ಇಂತಿಪ್ಪ ಬಡ ನಾಟಕ ಯಾವಾಗ್ಲೂ ಅವಜ್ಞೆಗೆ ಒಳಗಾಗುತ್ತೆ ಅಂತ ತಿಳ್ಕೊಂಡೋರಿದ್ದಾರೆ. ಅದು ಸಾಕಷ್ಟು ಮಟ್ಟಿಗೆ ಸತ್ಯ ಕೂಡ ಹೌದು. ಆದರೆ, ನಾಟಕದ ರುಚಿ ಅಂದರೆ ನಿಮ್ಮ ಅಜ್ಜಿಯ/ಅಮ್ಮನ ಕೈ ರುಚಿಯ ಹಾಗೆ.

ಅಡುಗೆ ಎಷ್ಟೇ ಸಿಂಪಲ್ ಆಗಿದ್ದರೂ, ಇನ್‌ಸ್ಟಾಗ್ರಾಮಿಗೆ ಹಾಕಿದರೆ ಹೆಚ್ಚು ಲೈಕ್ಸ್ ಬರುವುದಿಲ್ಲ ಅನ್ನುವ ಹಾಗಿದ್ದರೂ, ಅದರ ಮೇಲೆ ಹೇರಳ ಪ್ರಮಾಣಗಳಲ್ಲಿ ಚೀಸು, ಕ್ರೀಮು, ಗೋಡಂಬಿ, ಪಿಸ್ತಾ, ಬೆಣ್ಣೆ, ತುಪ್ಪ ಕಣ್ಣಿಗೆ ರಾಚುವಂತೆ ಹಾಕದೇ ಮಾಡಿದ್ದರೂ ನಾಲಿಗೆಗೆ ಮಾತ್ರವೇ ಅದರ ಸ್ಮರಣೆಯ ರುಚಿ ತಿಳಿಯುವಂತೆ ಅದೊಂದು ವೈಯಕ್ತಿಕ ಪ್ರಯಾಣ, ಅನುಭವ, ರೋಮಾಂಚನ ಎಲ್ಲವನ್ನೂ ಕೂಡಿದ ಒಂದು ಅನುಪಮ ಅನುಭೂತಿ.

ಇಷ್ಟೆಲ್ಲಾ ಹೇಳಿದ ಮೇಲೆ ನಾಟಕ ನೋಡುವುದು ಹೇಗೆ ಅಂತಲೂ ಹೇಳಬೇಕು ತಾನೆ?

ನಾಟಕವನ್ನು ನೋಡುವ ಅಭ್ಯಾಸ ಇರುವವರಿಗೆ ಇದು ಗೊತ್ತಿರುತ್ತದೆ. ನಾಟಕ ಶುರುವಾಗುವ ಮುನ್ನ ಮೂರು ಬಾರಿ ಬೆಲ್ ಶಬ್ದ ಆಗುತ್ತದೆ. ಅದು ಐದು ನಿಮಿಷದ ಅಂತರದಲ್ಲಿ ಇರಬಹುದು ಅಥವಾ ಇನ್ನೂ ಕಡಿಮೆ ಕೂಡ ಇರಬಹುದು. ಟರ್ರ್ ಅಂತ ಶಬ್ದ ಬಂದಾಗ ನಟರು ತಯಾರಾಗುವ ಗ್ರೀನ್ ರೂಮಿನಲ್ಲಿ ಎದೆಯ ಬಡಿತದ ಸದ್ದು ಏರುತ್ತದೆ.

> ‘ನಾಟಕ ಎನ್ನುವುದು ಎಲೆಯ ತುಂಬಾ ತುಂಬಿ ತುಂಬಿ ಬಡಿಸುವ ಊಟದ ಹಾಗೆ. ಎಲ್ಲವನ್ನೂ ನೀವು ರುಚಿ ನೋಡಬಹುದು, ಆದರೆ ಕಡೆಗೂ ನೀವು ಹುಡುಕುವುದು ನಿಮ್ಮ ನಾಲಿಗೆ ಮೆಚ್ಚುವ, ಆದಕ್ಕೆ ಪರಿಚಯ ಇರುವ ರುಚಿಯನ್ನೇ!

ಕೊನೆಯ ಹಂತದ ಮೇಕಪ್, ಎಂಟ್ರಿ, ಎಕ್ಸಿಟ್, ಹೇಳಬೇಕಾದ ಸಾಲುಗಳು ಎಲ್ಲವೂ ಮನನ ಆಗುತ್ತಿರುತ್ತವೆ. ಇಂದಿನ ನಾಟಕ ಚೆನ್ನಾಗಿ ನಡೆಯಲಿ ಎಂಬ ಸಣ್ಣದಾದ ಒಂದು ಪ್ರಾರ್ಥನೆಗೆ ಎಲ್ಲರೂ ಕೈಕೈ ಹಿಡಿದು ನಿಲ್ಲುವ ಅಭ್ಯಾಸ ಹಲವು ತಂಡಗಳಲ್ಲಿ ಇದೆ. ಮಧ್ಯೆ ಕಾಸ್ಟೂಮ್ ಬದಲಾವಣೆ ಇದ್ದರೆ ಅದಕ್ಕೆ ಬೇಕಾದ ಕಾಸ್ಟ್ಯೂಮು ಎಲ್ಲಿದೆ, ಅವಶ್ಯಕತೆ ಇರುವ ಪ್ರಾಪ್/ಪ್ರಾಪರ್ಟಿ, ಆಭರಣಗಳು, ಭದ್ರ ಮಾಡಿಕೊಳ್ಳಲು ಪಿನ್ನು, ದಾರ, ಲಾಡಿ ಮತ್ತೊಂದು ಎಲ್ಲವೂ ಕೈಗೆ ಸಿಗುವಂತೆ ಇದೆಯೋ ನೋಡಿಕೊಂಡು ಇದು ನನ್ನ ನಿಗದಿತ ಜಾಗ, ಇಲ್ಲಿರುವ ವಸ್ತುಗಳನ್ನು ಮುಟ್ಟಬೇಡಿ ಎಂದು ಎಲ್ಲರಿಗೂ ಮಾಹಿತಿ ರವಾನೆಯಾಗಿಬಿಡುತ್ತದೆ. ಈ ಮಾಹಿತಿ ಒಂದು ಆರ್ಡಿನೆನ್ಸಿನ ರೀತಿ ಇರುತ್ತದೆ. ಯಾರೂ ತಳ್ಳಿ ಹಾಕುವಂತಿಲ್ಲ.

ಆದರೆ, ಇದು ಪ್ರೇಕ್ಷಕರಿಗೂ ಒಂದು ಮಾನಸಿಕ ಸಿದ್ಧತೆಯ ತಯಾರಿಯ ಗಂಟೆ. ಇನ್ನೇನು ಸ್ವಲ್ಪ ಹೊತ್ತಿನಲ್ಲಿ ನಾಟಕ ಶುರುವಾಗುತ್ತದೆ. ನಮ್ಮ ನಮ್ಮ ಸೀಟಿನಲ್ಲಿ ಮಾನಸಿಕವಾಗಿ ತಯಾರಾಗಿ ಕುಳಿತುಕೊಳ್ಳಬೇಕು ಎನ್ನುವ ಸೂಚನೆ.

ಕೂತ ನಂತರ ತಿರುತಿರುಗಿ ನೋಡುವುದು. ನಮ್ಮವರು ಮತ್ಯಾರು ಬಂದಿದ್ದಾರೆ ಅಂತ. ಪಕ್ಕಾ ಮದುವೆ ಮನೆಯಲ್ಲಿ ಸಂಬಂಧಿಕರನ್ನು ಕಂಡು ಹರ್ಷಿಸಿದ ಹಾಗೆ.

“ಅಕ್ಕಾ, ನಾನು ನಾಟಕ ನೋಡಿಯೇ ಇಲ್ಲ ಯಾಕಂದರೆ ನಂಗೆ ಕಂಪ್ನಿ ಇಲ್ಲ” ಅಂತ ಹೊಸದಾಗಿ ಮೈಸೂರಿಗೆ ಶಿಫ್ಟ್ ಆದ ನನ್ನ ಸ್ನೇಹಿತೆಯೊಬ್ಬಳು ಹೇಳುತ್ತಾ ಇದ್ದಳು. “ನಾಟಕಕ್ಕೆ ಹೋಗೋದು